# ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ

## ಹೂವಿನಹಡಗಲಿ

## ಅಸಲು ದಾವೆ ನಂ ಃ 53/2015

**ಡಿಡಬ್ಲೂ ಃ 01**

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ ಃ 04-02-2019 ರಂದು ಸತ್ಯ ಪ್ರತಿಜ್ಞೆಯನ್ನು ಬೋದಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ಶ್ರೀ ಎಸ್ ಎಂ ಎಸ್ ವಕೀಲರಿಂದ ಃ

ನಾನು ನನ್ನ ಉದ್ಯೋಗದಿಂದ ನಿವೃತ್ತಿ ಹೊಂದುವ ಪೂರ್ವದಲ್ಲಿ ಇ ಓ ಆಗಿದ್ದೆ. ಸರ್ವೆ ನಂ ಃ 162 ಬಿ ಹೂವಿನಹಡಗಲಿ ಪಟ್ಟಣದಲ್ಲಿರುವ ಜಮೀನು ನನ್ನದೇ ಆಗಿರುತ್ತದೆ. ದಾವಾಆಸ್ತಿಯು ಇದೇ ಸರ್ವೆ ನಂಬರನಲ್ಲಿ ಬರುತ್ತದೆ ಅಂದರೆ ಸರಿ. ಸರ್ವೆ ನಂ ಃ 162 ರ ಜೊತೆಗೆ ಅನ್ಯಕ್ರಾಂತ ಮಾಡಿಸುವಾಗ ಸರ್ವೆ ನಂ ಃ 159/1 ಮತ್ತು 160 ಇವುಗಳನ್ನು ಕೂಡ ಅನ್ಯಕ್ರಾಂತ ಎಂದು ಮಾಡಿಸಿರುತ್ತೇನೆ ಅಂದರೆ ಸರಿ ಸದ್ರಿ ಅನ್ಯಕ್ರಾಂತಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಸಾಕ್ಷಿಗೆ ತೋರಿಸಲಾಗಿದ್ದು ಸಾಕ್ಷಿಯು ಅದನ್ನು ನೋಡಿ ಗುರ್ತಿಸಿದ್ದರಿಂದ ಅದನ್ನು ನಿಪಿ-14 ಎಂದು ಗುರ್ತಿಸಲಾಯಿತು. ಅನ್ಯಕ್ರಾಂತ ಮಾಡಿಸಿ ಲೇಔಟ ಪ್ಲಾನನ್ನು ಮಾಡಿಸಿರುವ ದಾಖಲಾತಿಯನ್ನು ಸಾಕ್ಷಿ ತೋರಿಸಲಾಗಿ ಅದನ್ನು ಸಾಕ್ಷಿಯು ನೋಡಿ ಗುರ್ತಿಸಿದ್ದರಿಂದ ಅದನ್ನು ನಿಪಿ-15 ಎಂದು ಗುರ್ತಿಸಲಾಯಿತು. ಈ ಮೂರು ಸರ್ವೆ ನಂಬರಗಳನ್ನು ಸೇರಿಸಿ ಒಟ್ಟಾರೆಯಾಗಿ ಎಷ್ಟು ಪ್ಲಾಟುಗಳನ್ನು ಮಾಡಿಸಿರುತ್ತೀರಿ ಅಂದರೆ ಅಂದಾಜು 387 ಪ್ಲಾಟುಗಳನ್ನು ಮಾಡಿಸಿರುತ್ತೇನೆ. ಅದರಲ್ಲಿ ಎಷ್ಟು ಪ್ಲಾಟಗಳನ್ನು ಮಾರಾಟ ಮಾಡಿರುತ್ತೀರಿ ಅಂದರೆ ಸುಮಾರು 290 ಪ್ಲಾಟುಗಳನ್ನು ಮಾರಾಟ ಮಾಡಿರುತ್ತೇನೆ. ಇವುಗಳನ್ನು ರಜಿಸ್ಟರ ಮಾಡಿ ಕೊಟ್ಟಿರುತ್ತೀರಾ ಅಂದರೆ ಕೆಲವು ಮಾಡಿಸಿರುತ್ತೇನೆ ಇನ್ನು ಕೆಲವು ರಜಿಸ್ಟರ ಮಾಡಿಸಿಕೊಡುವದು ಬಾಕಿ ಇರುತ್ತದೆ. ರಜಿಸ್ಟರ ಮಾಡಿಸಿಕೊಡುವ ಪ್ಲಾಟಗಳಲ್ಲಿ ದಾವಾಆಸ್ತಿಯ ಪ್ಲಾಟುಗಳು ಸಹ ಸೇರಿರುತ್ತವೆ ಅಂದರೆ ಸರಿ. ನೀವು ರಜಿಸ್ಟರ ಮಾಡಿಸಿಕೊಡದೇ ಇರುವ ಕಾರಣ ಈ ದಾವೆ ವಾದಿಯು ಸಲ್ಲಿಸಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ನಿಮಗೆ ಬಹಳಷ್ಟು ಪ್ಲಾಟ ಇರುವುದರಿಂದ ನಿಮಗೆ ಎಲ್ಲಾ ವ್ಯಕ್ತಿಗಳ ಬಗ್ಗೆ ಹೆಚ್ಚಿನ ಮಾಹಿತಿ ಇರುವುದಿಲ್ಲವೆಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಗಿದ್ದು ಅದರಲ್ಲಿ ನಿಮ್ಮ ಸಹಿ ಎಲ್ಲಿ ಇರುತ್ತದೆ ಅಂದರೆ ಅದರಲ್ಲಿರುವ ಸಹಿ ನನ್ನದು ಅಲ್ಲ. ಸಾಕ್ಷಿಗೆ ವಕಾಲತನ್ನು

ತೋರಿಸಲಾಗಿದ್ದು ಅದರಲ್ಲಿರುವ ಸಹಿ ಎಲ್ಲಿ ಇರುತ್ತದೆ ಅಂದರೆ ಅದರಲ್ಲಿರುವ ಸಹಿ ನೋಡಿ ಗುರ್ತಿಸಿರುತ್ತಾರೆ ಸಾಕ್ಷಿಯು ವಕಾಲತನ್ನು ನೋಡಿ ಗುರ್ತಿಸಿದ್ದರಿಂದ ಅದನ್ನು ನಿಪಿ-16 ಎಂದು ಸಾಕ್ಷಿ ಸಹಿಯನ್ನು ನಿಪಿ-16 (ಎ) ಎಂದು, ಅದೇರೀತಿ ಪ್ರತಿವಾದಪತ್ರವನ್ನು ತೋರಿಸಲಾಗಿದ್ದು ಅದರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರ್ತಿಸಿರುತ್ತಾರೆ ಸದ್ರಿ ಪ್ರತಿವಾದಪತ್ರವನ್ನು ನಿಪಿ-17 ಎಂದು, ಸಾಕ್ಷಿ ಸಹಿಯನ್ನು ನಿಪಿ-17 (ಎ) ಎಂದು ಗುರ್ತಿಸಲಾಯಿತು. ಸಾಕ್ಷಿಗೆ ಮಧ್ಯಂತರ ಅರ್ಜಿಯ ನಂ ಃ 3 ರ ಪ್ರಮಾಣಪತ್ರವನ್ನು ತೋರಿಸಲಾಗಿದ್ದು ಅದರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರ್ತಿಸಿರುತ್ತಾರೆ. ಸದ್ರಿ ಪ್ರಮಾಣಪತ್ರವನ್ನು ನಿಪಿ-18 ಎಂದು ಸಾಕ್ಷಿಯ ಸಹಿಯನ್ನು ನಿಪಿ-18 (ಎ) ಎಂದು, ಅದೇರೀತಿ ಸಾಕ್ಷಿಗೆ ವ್ಮಧ್ಯಂತರ ಅರ್ಜಿ ನಂ ಃ 5 ಮತ್ತು 6 ರ ಪ್ರಮಾಣಪತ್ರವನ್ನು ತೋರಿಸಲಾಗಿದ್ದು ಅದರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರ್ತಿಸಿರುತ್ತಾರೆ. ಸದ್ರಿ ಪ್ರಮಾಣಪತ್ರವನ್ನು ನಿಪಿ-19 ಮತ್ತು ನಿಪಿ-20 ಎಂದು ಸಾಕ್ಷಿಯ ಸಹಿಯನ್ನು ನಿಪಿ-19 (ಎ) ಮತ್ತು ನಿಪಿ-20 (ಎ) ಎಂದು ಗುರ್ತಿಸಲಾಯಿತು. ಅದೇರೀತಿ ನಿಪಿ-1 ರಲ್ಲಿರುವ ಸಹಿ ನಿಮ್ಮದೇ ಆಗಿದ್ದರೂ ಸಹ ನಿಮ್ಮದು ಅಲ್ಲವೆಂದು ನೀವು ಸುಳ್ಳು ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ. ನನಗೆ ಅಂಚೆ ಸ್ವೀಕೃತಿಪತ್ರ ನಿಪಿ-5 ನ್ನು ತೋರಿಸಲಾಗಿದ್ದು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ ಸಾಕ್ಷಿಯು ಸಹಿಯನ್ನು ನೋಡಿ ಗುರ್ತಿಸಿದ್ದರಿಂದ ಅದನ್ನು ನಿಪಿ-5 (ಎ) ಎಂದು ಗುರ್ತಿಸಲಾಯಿತು.

02. ನೀವು ಸೈಟನ್ನು ಮಾರಾಟ ಮಾಡುವ ಸಮಯದಲ್ಲಿ ಯಾರ್‍ಯಾರು ಬಂದಿದ್ದರು ಅಂದರೆ ನಾನು ಸೈಟನ್ನು ಮಾರಾಟ ಮಾಡಿಲ್ಲ. ನೀವು 2008 ರಲ್ಲಿ ಈ ಸೈಟನ್ನು ಹೊರತುಪಡಿಸಿ ಬೇರೆ ಸೈಟನ್ನು ಮಾರಾಟ ಮಾಡಿರುತ್ತೀರಿ ಅಂದರೆ ಸರಿ. ಅವುಗಳಲ್ಲಿ ಕೂಡ ಕೆಲವೊಂದಕ್ಕೆ ನೀವು ರಜಿಸ್ಟ್ರೇಶನ ಮಾಡಿಸಿಕೊಡದೇ ಸತಾಯಿಸುತ್ತಿದ್ದೀರಿ ಅಂದರೆ ಸರಿಯಲ್ಲ. ದಾವಾಆಸ್ತಿಯ ಬಗ್ಗೆ ಸಂಪೂರ್ಣವಾದ ಹಣವನ್ನು ಪಡೆದುಕೊಂಡಿದ್ದರೂ ಸಹ ವಾದಿಗಳಿಗೆ ದಾವಾಆಸ್ತಿಯನ್ನು ರಜಿಸ್ಟ್ರೈಶನ ಮಾಡಿಸಿಕೊಡದೆ ಸತಾಯಿಸುತ್ತಿದ್ದೀರಿ ಅಂದರೆ ಸರಿಯಲ್ಲ.

03. ನನಗೆ ಕಾಳಪ್ಪ ಮತ್ತು ಅಬ್ದುಲರಜಾಕ ಯಾರು ಎಂದು ಗೊತ್ತಿಲ್ಲ. ಪತ್ರಬರಹಗಾರ ನಿಂಗಪ್ಪ ನಿಮಗೆ ಗೊತ್ತು ಅಂದರೆ ಗೊತ್ತು. ನೀವು ಮಾರಾಟ ಮಾಡಿದ ಎಲ್ಲಾ ಆಸ್ತಿಗಳ ಕ್ರಯಪತ್ರವನ್ನು ನಿಂಗಪ್ಪನ ಬಳಿಯಲ್ಲಿ ಮಾಡಿಸಿರುತ್ತೀರಿ ಅಂದರೆ ಬಹಳಷ್ಟು ಮಾಡಿಸಿರುತ್ತೇನೆ. ವಾದಿ ನಿಮಗೆ ಅನೇಕ ಸಲ ದಾವಾಆಸ್ತಿಯನ್ನು ರಜಿಸ್ಟ್ರೈಶನ ಮಾಡಿಸಿಕೊಡಿ ಎಂದು ಕೇಳಿರುತ್ತಾರೆ ಅಂದರೆ ಸರಿಯಲ್ಲ. ಅದಕ್ಕೆ

ಸಂಬಂಧಿಸಿದಂತೆ ನೀವು ಹೆಚ್ಚಿಗೆ ಹಣವನ್ನು ಕೊಡಬೇಕೆಂದು ಬೇಡಿಕೆ ಇಟ್ಟಿದ್ದು ನಂತರದಲ್ಲಿ ರಜಿಸ್ಟ್ರೇಶನ ಕೂಡ ಮಾಡಿಸಿಕೊಟ್ಟಿರುವುದಿಲ್ಲವೆಂದರೆ ನಾನು ಅವರಿಗೆ ದಾವಾಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ. ನೀವು ನಿಮಗೆ ಸಂಬಂಧಿಸಿದ ಪ್ಲಾಟುಗಳನ್ನು ಅಬ್ದುಲರಜಾಕ ಮತ್ತು ಕಾಳಪ್ಪ ರವರ ಮುಖಾಂತರ ಬಹಳಷ್ಟು ಪ್ಲಾಟುಗಳನ್ನು ಮಾರಾಟ ಮಾಡಿರುತ್ತೀರಾ ಅಂದರೆ ಸರಿಯಲ್ಲ. ಅವರು ನನಗೆ ಗೊತ್ತೆ ಇಲ್ಲ.

04. ವಾದಿಯು ನೋಟಿಸನ್ನು ಕಳುಹಿಸಿರುತ್ತಾರೆ ಅಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿದಂತೆ ನೀವು ಮರುತ್ತರವನ್ನು ಕೊಟ್ಟಿಲ್ಲವೆಂದರೆ ವಾದಿಯು ಸಲ್ಲಿಸಿದ ನೋಟಿಸಿನ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯು ದಾವಾಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದು ನಿಮಗೆ ಯಾವಾಗ ಗೊತ್ತಾಗಿರುತ್ತದೆ ಅಂದರೆ ಅವರು ಗೊತ್ತಿಲ್ಲ ನಾನು ಅವರಿಗೆ ದಾವಾಆಸ್ತಿಯನ್ನು ಮಾರಾಟ ಮಾಡಿಲ್ಲ. ನಿಮಗೆ ಎಲ್ಲ ವಿಷಯ ಗೊತ್ತಿದ್ದರೂ ನೀವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ.

05. ನಾನು ಈ ದಾವೆಯಲ್ಲಿ ತಕರಾರನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ನೆನಪಿಲ್ಲ. ಸಾಕ್ಷ್ಯ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿರುತ್ತವೆ. ವಾದಿಯು ಕರಾರುಪತ್ರವನ್ನು ಸೃಷ್ಠಿ ಮಾಡಿರುತ್ತಾರೆ ಎಂದು ನೀವು ನಿಮ್ಮ ಪ್ರಮಾಣಪತ್ರದಲ್ಲಿ ಹೇಳಿರುತ್ತೀರಿ ಅದರ ಬಗ್ಗೆ ಕಾನೂನುಕ್ರಮ ಜರುಗಿಸಿರುತ್ತೀರಾ ಅಂದರೆ ಇಲ್ಲ. ನಿಂಗಪ್ಪ ಕರೆದು ಕರಾರುಪತ್ರವನ್ನು ನಾನು ಬರೆದುಕೊಟ್ಟಿಲ್ಲ ಮತ್ತು ಸಹಿಯನ್ನು ಕೂಡ ಮಾಡಿರುವುದಿಲ್ಲವೆಂದು ಅವರ ಬಳಿಯಲ್ಲಿ ಕೇಳಿರುತ್ತೀರಾ ಅಂದರೆ ಕೇಳಿಲ್ಲ ನಾನು ಮಾರಾಟ ಮಾಡಿಲ್ಲ. ನೀವೇ ನಿಪಿ-1 ನ್ನು ಬರೆದುಕೊಟ್ಟಿರುವುದರಿಂದ ನೀವು ಕೇಳಿರುತ್ತೀರಿ ಅಂದರೆ ಸರಿಯಲ್ಲ. ಇನ್ನು ಎಷ್ಟು ಪ್ಲಾಟುಗಳು ಮಾರಾಟ ಮಾಡುವುದು ಉಳಿದಿರುತ್ತವೆ ಅಂದರೆ 60 ರ ಮೇಲೆ ಉಳಿದಿರುತ್ತವೆ ಎಲ್ಲವನ್ನು ಮಾರಾಟ ಮಾಡಿದ್ದರೂ ಸಹ ರಜಿಸ್ಟ್ರೇಶನ ಮಾಡಿಸಿಕೊಡದೇ ಖರೀದಿದಾರರನ್ನು ಸತಾಯಿಸುತ್ತಿದ್ದೀರಿ ಅಂದರೆ ಸರಿಯಲ್ಲ. ನೀವು ಹಿರಿಯರು ಮತ್ತು ಗೌರವಾನ್ವಿತ ವ್ಯಕ್ತಿಗೇಳು ಎಂದು ವಾದಿಗಳು ತುಂಬಾ ಸಲ ನಿಮ್ಮ ಬಳಿಯಲ್ಲಿ ದಾವಾಆಸ್ತಿಯ ರಜಿಸ್ಟ್ರೇಶನ ಮಾಡಿಸಿಕೊಡಬೇಕೆಂದು ಕೇಳಿರುತ್ತಾನೆ ಅಂದರೆ ಸರಿಯಲ್ಲ. ನೀವು ಇವತ್ತು ಮಾಡಿಕೊಡುತ್ತೇನೆ ನಾಳೇ ಮಾಡಿಕೊಡುತ್ತೇನೆ ಅಥವಾ ಹೆಚ್ಚಿಗೆ ದುಡ್ಡನ್ನು ಕೊಡಬೇಕೆಂದು ಅವರನ್ನು ಸತಾಯಿಸುತ್ತಾ ಬಂದಿರುತ್ತೀರಿ ಅಂದರೆ ಸರಿಯಲ್ಲ. 2008 ಕ್ಕೂ ಮತ್ತು ಈಗ ಆಸ್ತಿಯ ಮೌಲ್ಯ ತುಂಬಾ ಹೆಚ್ಚಾಗಿರುತ್ತದೆ ಅಂದರೆ ಸರಿ. ಅದೇ ಉದ್ದೇಶದಿಂದ ದಾವಾಆಸ್ತಿಯ ರಜಿಸ್ಟ್ರೇಶನ ಅನ್ನು ಮಾಡಿಸಿಕೊಡುತ್ತಾ

ಇಲ್ಲವೆಂದರೆ ಸರಿಯಲ್ಲ. ನೀವು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ತಕರಾರನ್ನು ಹಾಕಿರುತ್ತೀರಿ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ,

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೂವಿನಹಡಗಲಿ.

ಎಸ್ ಎಸ್ ಜೆ
ನಕಲು ಬೆರಳಚ್ಚುಗಾರರು.